<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ</u>

<u>ಸಿಸಿ ನಂ. **1527/2020**</u>

ಚಾಸಾ-4 ಪ್ರಾಸಾ-3

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 02-05-2026

| | | |
|---|---|---|
| ಹೆಸರು | : | ಧನರಾಜ |
| ತಂದೆಯ ಹೆಸರು | : | ವೀರಭದ್ರಪ್ಪ |
| ವಯಸ್ಸು | : | 61 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ಬಡದಾಳ |

-: <u>ಮುಖ್ಯ ವಿಚಾರಣೆ **:-** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ **:-**</u>

ಚಾಸಾ 1, 5 ರವರು ಪರಿಚಯ ಇರುತ್ತಾರೆ.

ಸಾಕ್ಷಿಗೆ ಗುನ್ಹೆಸ್ಥಳ ಪಂಚನಾಮೆಯನ್ನು ತೋರಿಸಿದ್ದು ಸಾಕ್ಷಿ ಅದರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು ಗುನ್ಹೆಸ್ಥಳ ಪಂಚನಾಮೆಯನ್ನು ನಿಪಿ-**10** ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-**10**(ಎ) ಎಂದು ಗುರುತಿಸಲಾಯಿತು.

2020 ನೇ ಇಸವಿಯಲ್ಲಿ ಅರ್ಜುನಗಿ ತಾಂಡಾದ ಹತ್ತಿರ ಅಪಘಾತ ಆಗಿದ್ದು ಅಪಘಾತ ಸ್ಥಳದಲ್ಲಿ ಪೋಲಿಸರು ಪಂಚನಾಮೆ ಮಾಡಿ ಸಹಿ ಪಡೆದಿರುತ್ತಾರೆ. ಗುನ್ಹೆಸ್ಥಳದಲ್ಲಿ ಮೋಟರ ಸೈಕಲ ಇತ್ತು.

ಸಾಕ್ಷಿಗೆ ಗುನ್ಹೆಸ್ಥಳ ಪಂಚನಾಮೆ ಕಾಲಕ್ಕೆ ತೆಗೆಯಲಾಯಿತು ಎಂದು ಹೇಳುವ ಭಾವಚಿತ್ರ ಗಳನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿಯೂ ಅದನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೆ ನಿಪಿ-**4** ಎಂದು ಗುರುತಿಸಲಾಗಿದೆ.

ಸಾಕ್ಷಿಗೆ ಅಪಘಾತ ಪಡಿಸಿತು ಎಂದು ಹೇಳುವ ಮೋಟರ ಸೈಕಲನ ಭಾವಚಿತ್ರಗಳನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿಯೂ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೆ ನಿಪಿ **5** ರಿಂದ **8** ಎಂದು ಗುರುತಿಸಲಾಗಿದೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀ **D.K.** ವಕೀಲರಿಂದಃ-

ಗುನ್ಹೆಸ್ಥಳ ಚೆಕ್ಕುಬಂದಿ ಹೇಳಲು ಬರುತ್ತದೆ. ನಾವು ಅಪಘಾತ ಸುದ್ದಿ ಕೇಳಿ ಗುನ್ಹೆಸ್ಥಳಕ್ಕೆ ಹೋಗಿರುತ್ತೇವೆ. ಗುನ್ಹೆಸ್ಥಳದಲ್ಲಿ ಸುಮಾರು 15-20 ಜನರು ಸೇರಿದ್ದರು. ನಮ್ಮೂರಿನಿಂದ ಗುನ್ಹೆಸ್ಥಳ 4 ಕಿ.ಮಿ, ಇರುತ್ತದೆ. ಪೋಲಿಸರು ನನ್ನೊಂದಿಗೆ ಚಾಸಾ 5 ರವರ ಸಹಿ ಸಹ ಪಡೆದಿರುತ್ತಾರೆ.

ನನಗೆ ಗುನ್ಹೆಸ್ಥಳ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಪೋಲಿಸರು ಗುನ್ಹೆಸ್ಥಳ ಪಂಚನಾಮೆ ಮಾಡಿ ನನ್ನ ಸಹಿ ಪಡೆದಿರುತ್ತಾರೆ. ಮೋಟರ ಸೈಕಲ ರಸ್ತೆಯ ಉತ್ತರ ದಿಕಿಗೆ ಬಿದ್ದಿತ್ತು. ಪೋಲಿಸರು ಗುನ್ಹೆಸ್ಥಳದಲ್ಲಿ ನನ್ನ ಸಹಿ ಪಡೆದಿರುತ್ತಾರೆ. ಮತ್ತು ಒಂದು ಸಾರಿ ನನ್ನ ತೋಟಕ್ಕೆ ಬಂದು ಭೇಟಿಯಾಗಿರುತ್ತಾರೆ. ನಾನು ಗುನ್ಹೆಸ್ಥಳಕ್ಕೆ 12 ರಿಂದ 1 ಗಂಟೆಗೆ ಹೋಗಿದ್ದೆ, 2 ಗಂಟೆಗೆ ಪಂಚನಾಮೆ ಮಾಡಿರುತ್ತಾರೆ. ಪೋಲಿಸರ ಮಾತುಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ - ಇಲ್ಲ**.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ